ದಿನಾಂಕಃ 05.04.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಡಿ. ವಕೀಲರಿಂದಃ**

ದಾವಾ ಸ್ವತ್ತಿನಲ್ಲಿ ಗ್ರೀನ್ ಹೌಸ್, ಪಾಲೀ ಹೌಸ್, ಮಂಗಳೂರು ಹಂಚಿನ ಮನೆ, ವಾಟರ್ ಟ್ಯಾಂಕ್ ಮತ್ತು ಟ್ರ್ಯಾಕ್ಟರ್ ಶೆಡ್ ಇದೆ. ಸದರಿ ಕಟ್ಟಡಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಸಂಪರ್ಕದ ಬಿಲ್ ಇದೆ. ಆ ಕರೆಂಟ್ ಬಿಲ್ ನ್ನು ಹಾಜರುಪಡಿಸಿಲ್ಲ. ಸದರಿ ಮನೆಗಳ ಖಾತೆ ನನ್ನ ತಂದೆಯ ಹೆಸರಿನಲ್ಲಿ ಇದೆ. ಸದರಿ ಮನೆಗಳ ಬಾಬ್ತು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಸದರಿ ಮನೆಗಳು 2004 ನೇ ಇಸವಿಯಿಂದಲೂ ಇವೆ ಅದನ್ನು ನಾನೇ ಕಟ್ಟಿಸಿದ್ದೇನೆ. ಸದರಿ ಮನೆಗಳನ್ನು ಕಟ್ಟಿಸುವಾಗ ಗ್ರಾಮಪಂಚಾಯಿತಿಯಿಂದ ಅನುಮತಿ ಪಡೆದಿರಲಿಲ್ಲ. ಸದರಿ ಮನೆಗಳು ಅಂಥೋರಿಯಮ್ ಪ್ಲಾಂಟ್ ನ ಉತ್ತರ ಭಾಗಕ್ಕೆ ಹಾಗೂ ಪ್ಲಾಂಟ್ ನ ಮಧ್ಯಭಾಗದಲ್ಲಿ ಒಂದು ಮನೆ ಇದೆ. ಸ.ನಂ.306 ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸ.ನಂ.306 ರಲ್ಲಿ ಪೃಥ್ವೀರಾಜ್ ಎನ್ನುವವರಿಗೆ ಜಮೀನು ಇದೆ ಎಂದರೆ ಸರಿ.

ಸ.ನಂ.306 ರಲ್ಲಿ ಜಮೀನು ಮಂಜೂರಿ ಮಾಡುವಂತೆ ಕೋರಿ 2019 ರಲ್ಲಿ ಅರ್ಜಿ ಸಲ್ಲಿಸಲಾಗಿದೆ. ಈ ಸಂಬಂಧ ಅರ್ಜಿ ಮತ್ತು ಸ್ಕೆಚ್ ನ್ನು ಹಾಜರುಪಡಿಸಿದ್ದೇನೆ. ಮಂಜೂರಾತಿ ಸ್ಕೆಚ್ ನ್ನು 2019 ರಲ್ಲಿ ಬರೆಯಲಾಗಿದೆ. ಸ.ನಂ.306 ರ ದಾವಾ ಅನುಸೂಚಿ ಸ್ವತ್ತಿನ ದಕ್ಷಿಣ ದಿಕ್ಕಿಗೆ ಎಂ.ವಿ.ದೇವೇಗೌಡರವರ ತೋಟ ಇದೆ. ಸದರಿ ತೋಟದ ಸ.ನಂ. ನನಗೆ ಗೊತ್ತಿಲ್ಲ. ದಾವಾ ಜಮೀನಿನ ಉತ್ತರ ದಿಕ್ಕಿಗೆ ಪೃಥ್ವೀರಾಜ್ ರವರ ಜಮೀನು ಇದೆ. ಸ.ನಂ.416/4, ಸ.ನಂ.306 ರ ದಾವಾ ಜಮೀನಿನ ಪೂರ್ವ ದಿಕ್ಕಿಗೆ ಇದೆ. ಸ.ನಂ.416/4 ಸರ್ಕಾರದ ಹೆಸರಿನಲ್ಲಿ ಇದೆ. ಈ ಬಗ್ಗೆ ತೋರಿಸಲು ಪಹಣಿಯನ್ನು ಹಾಜರುಪಡಿಸಿದ್ದೇನೆ. ಸ.ನಂ.416/4 ರಲ್ಲಿ ಒಟ್ಟು ವಿಸ್ತೀರ್ಣದ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿಯಲ್ಲಿ ನಮೂದಿಸಿರುವ ಸ.ನಂ.416/4 ರ ಪೂರ್ವ ದಿಕ್ಕಿಗೆ ಸ.ನಂ.416/1 ರಿಂದ 416/3 ರ ಜಮೀನುಗಳು ಇವೆ. ಸದರಿ ಸ.ನಂ.416/4 ರ ದಕ್ಷಿಣ ದಿಕ್ಕಿಗೆ ಎಂ.ವಿ.ದೇವೇಗೌಡರವರ ಜಮೀನು, ಉತ್ತರ ದಿಕ್ಕಿಗೆ ಸ.ನಂ.416/3 ರ ಜಮೀನು ಇದೆ.

ಸ.ನಂ.416/3 ರ ಜಮೀನು 1ನೇ ಪ್ರತಿವಾದಿಗೆ ಸೇರಿದೆ ಎಂದರೆ ಸರಿ. ಈ ಮೇಲೆ ಹೇಳಿರುವ ಚೆಕ್ಕುಬಂದಿಯನ್ನು ವಾದಪತ್ರದಲ್ಲಿ ಬರೆಸಿದ್ದೇನೆ. ದಾವಾ ಅನುಸೂಚಿಯಲ್ಲಿ ನಮೂದಿಸಿರುವ ಸ.ನಂ.306 ಮತ್ತು ಸ.ನಂ.416/4 ರ ಜಮೀನುಗಳ ಪಶ್ಚಿಮ ದಿಕ್ಕಿಗೆ ಅಂಥೋರಿಯಮ್ ಪ್ಲಾಂಟ್ ಇದೆ. ಈ ವಿಷಯವನ್ನು ಪ್ರಸ್ತುತ ವಾದಪತ್ರದಲ್ಲಿ ಬರೆಸಲಾಗಿದೆ. ಅಂಥೋರಿಯಮ್ ಪ್ಲಾಂಟ್ ಸ.ನಂ.416/3 ರಲ್ಲಿ ಇದೆ ಎಂದರೆ ಸರಿಯಲ್ಲ. ನಾವು ಈ ಹಿಂದೆ ಪಾಲು ಮಾಡಿಕೊಂಡಿದ್ದೇವೆ ಎಂದು ಹೇಳಿದ 1985 ರ ಪಾಲುಪತ್ರದಲ್ಲಿ ದಾವಾ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತುಗಳು ನನಗೆ ಬರಬೇಕು ಎಂದು ಬರೆದಿಲ್ಲ.

ದಾವಾ ಅನುಸೂಚಿ ಸ್ವತ್ತುಗಳು ಸರ್ಕಾರಿ ಜಾಗಗಳು ಎಂದರೆ ಸರಿ. ಸದರಿ ಜಮೀನುಗಳು ನನ್ನ ತಂದೆಯ ಕಾಲದಿಂದಲೂ ಇದ್ದವು. ನಾನು 1977 ನೇ ಇಸವಿಯಲ್ಲಿ ಬೆಂಗಳೂರಿಗೆ ಹೋದೆ. ಆ ಸಮಯಕ್ಕೆ ದಾವಾ ಜಮೀನುಗಳು ಹಾಳು ಬಿದಿದ್ದು ಅಲ್ಲಲ್ಲಿ ಕೆಲವು ಕಾಫೀ ಗಿಡಗಳು ಇದ್ದವು. ಆ ಕಾಫೀ ಗಿಡಗಳನ್ನು ನಾನೇ ಹಾಕಿಸಿರುತ್ತೇನೆ. ಸದರಿ ಜಮೀನುಗಳಲ್ಲಿ ನನ್ನ ಅಜ್ಜನ ಕಾಲದಿಂದಲೂ ಸೀಗೆ ಕಾಡು ಇದ್ದು ಅದನ್ನು ಕಡಿಸಿ ನಾನು ಕಾಫೀ ಗಿಡಗಳನ್ನು ಹಾಕಿಸಿರುತ್ತೇನೆ. ದಾವಾ ಅನುಸೂಚಿ ಸ್ವತ್ತುಗಳ ಪಕ್ಕ ಅಂದರೆ ಪೂರ್ವ ದಿಕ್ಕಿಗೆ ನನ್ನ ಚಿಕ್ಕಪ್ಪ ಎಂ.ಟಿ.ಹುಚ್ಚೇಗೌಡರವರ ಜಮೀನು ಇತ್ತು. ಸದರಿ ಹುಚ್ಚೇಗೌಡರವರ ಜಮೀನು ಈಗಲೂ ಸಹಾ ಅವರ ಕುಟುಂಬದವರ ಹತ್ತಿರ ಇದೆ ಎಂದರೆ ಸರಿ. ಎಂ.ಟಿ.ಹುಚ್ಚೇಗೌಡರವರ ಜಮೀನಿನಲ್ಲಿ ಈಗ ಅವರ ಮಗ ಎಂ.ಹೆಸ್.ಶರಣುರವರು ವ್ಯವಸಾಯ ಮಾಡುತ್ತಿದ್ದಾರೆ. ದಾವಾ ಜಮೀನುಗಳ ಒಂದು ದಿಕ್ಕಿಗೆ ಶಾರದಮ್ಮ ರವರ ಜಮೀನು ಇದೆ ಎಂದು ಹೇಳಿದ್ದು ಅವರು ಎಂ.ಟಿ.ಹುಚ್ಚೇಗೌಡರವರ ಪತ್ನಿಯಾಗಿದ್ದಾರೆ.

ದಿ.30.04.2001 ರ ಜುಬಾನೆ ಹಿಸ್ಸೆಯಲ್ಲಿ ದಾವಾ ಜಮೀನುಗಳ ಬಗ್ಗೆ ನಮೂದಿಸಲಾಗಿಲ್ಲ. ಆದರೆ ಅಂಥೋರಿಯಮ್ ಪ್ಲಾಂಟ್ ನ್ನು ನಾನು ಇಟ್ಟುಕೊಳ್ಳುವುದಾಗಿ ತೋರಿಸಲಾಗಿದೆ. ದಾವಾ ಜಮೀನುಗಳು ನಿಮ್ಮ ಪಾಲಿಗೆ ಇದಿದ್ದರೆ ಆ ಬಗ್ಗೆ ಜುಬಾನೆ ಹಿಸ್ಸೆಯಲ್ಲಿ ನಮೂದು ಇರುತಿತ್ತು ಎಂದರೆ ಸಾಕ್ಷಿಯು ಸರ್ಕಾರಿ ಜಮೀನುಗಳಾದ ಕಾರಣ ತೋರಿಸಿಲ್ಲ ಎಂದು ನುಡಿಯುತ್ತಾರೆ. ಸರ್ಕಾರಿ ಜಮೀನುಗಳಲ್ಲಿನ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಿಕೊಳ್ಳಲು 1998 ನೇ ಇಸವಿಯಿಂದ ಅರ್ಜಿ ಸಲ್ಲಿಸಬಹುದಾಗಿತ್ತು ಎಂದರೆ ಸರಿ. ದಾವಾ ಜಮೀನುಗಳ ಸಕ್ರಮ ಕೋರಿ 1998 ನೇ ಇಸವಿಯಲ್ಲಿ ನಾನು ಅರ್ಜಿ ಸಲ್ಲಿಸಿದ್ದೆ. ಈ ಬಗ್ಗೆ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ದಾವಾ ಜಮೀನುಗಳು ಸರ್ಕಾರಿ ಸ್ವತ್ತು ಎಂದು ವಾದಪತ್ರದಲ್ಲಿ ಬರೆಸಲಾಗಿದೆ. ಸರ್ಕಾರಿ ಜಮೀನುಗಳಲ್ಲಿ ಕಟ್ಟಡ ಮತ್ತು ಅಂಥೋರಿಯಮ್ ಪ್ಲಾಂಟ್ ಕಟ್ಟಿದ್ದರೆ ಅವುಗಳಿಗೆ ಸಾಲ ಕೊಡುವುದಿಲ್ಲ ಎಂದರೆ ಸರಿ.

ಸರ್ಕಾರಿ ಜಮೀನಿನಲ್ಲಿ ಅಂಥೋರಿಯಮ್ ಪ್ಲಾಂಟ್ ನಿರ್ಮಿಸಿರುವ ಬಗ್ಗೆ ನಾನು 2002 ನೇ ಇಸವಿಯಲ್ಲಿ ನ್ಯಾಷನಲ್ ಆರ್ಟಿಕಲ್ಚರ್ ಬೋರ್ಡ್ ಹಾಗೂ SFAC ರವರಿಗೂ ಅರ್ಜಿ ಸಲ್ಲಿಸಿದ್ದೇನೆ. ನಿಪಿ-4 ಮತ್ತು 5 ರಲ್ಲಿ ಯಾವ ಜಮೀನಿನಲ್ಲಿ ಅಂಥೋರಿಯಮ್ ಪ್ಲಾಂಟ್ ನಿರ್ಮಾಣಮಾಡಲಾಗಿದೆ, ಜಮೀನಿನ ಸ.ನಂ. ಮತ್ತು ಗ್ರಾಮ ನಮೂದಿಸಿಲ್ಲ ಎಂದರೆ ಸರಿ. ಸದರಿ ದಾಖಲೆಗಳಲ್ಲಿ ನನ್ನ ಬೆಂಗಳೂರಿನ ವಿಳಾಸ ಇದೆ ಎಂದರೆ ಸರಿ. ಮಾಕೋನಹಳ್ಳಿ ಗ್ರಾಮದಲ್ಲಿ ಅಂಥೋರಿಯಮ್ ಪ್ಲಾಂಟ್ ಇದೆ ಎಂದು ನಿಪಿ-4 ಮತ್ತು 5 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಜಮೀನಿನ ಸ.ನಂ. ಗಳು ನಮೂದು ಇಲ್ಲ ಎಂದರೆ ಸಾಕ್ಷಿಯು ನಿಪಿ-6 ನ್ನು ಕೊಟ್ಟಿರುವವರು ತಮಗೆ ಗ್ರೀನ್ ಹೌಸ್ ಒದಗಿಸಿ ಹೂವು ಖರೀದಿಸುತ್ತಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ಸೇರಿದ ಅಂಥೋರಿಯಮ್ ಪ್ಲಾಂಟ್‌ನ್ನು ಕಬಳಿಸುವ ಉದ್ದೇಶದಿಂದ ನಿಪಿ-4 ರಿಂದ 7 ರ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-1 ರಿಂದ 3, 8 ರಿಂದ 16 ರಲ್ಲಿ ಗುರುತಾಗಿರುವ ಕಂದಾಯ ದಾಖಲಾತಿಗಳಲ್ಲಿ ನನ್ನ ಹೆಸರು ಇಲ್ಲ ಎಂದರೆ ಸರಿ, ಆದರೆ ಸರ್ಕಾರಿ ಜಾಗ ಎಂದು ಇದೆ. ಸದರಿ ಕಂದಾಯ ದಾಖಲಾತಿಗಳನ್ನು ನಾನೇ ಸೃಷ್ಟಿಸಿಕೊಂಡು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ಕಾರಿ ಜಮೀನಿಗೆ ಟಿಪ್ಪಣಿ, RR ನಕ್ಷೆ ಸಿಗುವುದಿಲ್ಲ ಎಂದರೆ ಸರಿ. ದಿ.05.02.2021 ರಂದು ದಾವಾ ಜಮೀನುಗಳು ನನಗೆ ಮಂಜೂರಾಗಿರಲಿಲ್ಲ. ದಾವಾ ಜಮೀನುಗಳಲ್ಲಿ ನಾನು ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿಯಲ್ಲಿ ನಮೂದಿಸಿರುವ ಸ.ನಂ.306 ರ ಸಂಬಂಧ ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ಶಾಖೆಯಲ್ಲಿ ಸಾಲ ಪಡೆದಿದ್ದೇನೆ. ಸಾಲ ಪಡೆಯುವಾಗ ಸದರಿ ಜಮೀನಿನ ಪಹಣಿಯನ್ನು ಬ್ಯಾಂಕಿನವರಿಗೆ ಕೊಟ್ಟಿದ್ದೇನೆ. ಹಾಗೇ ಪಹಣಿಯನ್ನು ಕೊಡುವಾಗ ಸರ್ಕಾರದ ಅನುಮತಿ ಪಡೆದಿರಲಿಲ್ಲ.

ಸ.ನಂ.416/3 ರ 4 ಎಕರೆ 38 ಗುಂಟೆ ಜಮೀನು 1 ನೇ ಪ್ರತಿವಾದಿಗೆ ಫಾರಂ.ನಂ.53 ರಲ್ಲಿ ಮಂಜೂರಾಗಿದೆ. ನಿಪಿ-18 ಮತ್ತು 19 ರ ದಾಖಲೆಗಳು 1 ನೇ ಪ್ರತಿವಾದಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸ.ನಂ.306 ರ ಜಮೀನಿನ ಮಂಜೂರಿ ಕೋರಿ ಅರ್ಜಿ ಸಲ್ಲಿಸಿದ ನಂತರ ತಾಲ್ಲೂಕು ಕಚೇರಿ ಅಧಿಕಾರಿಗಳು ಈವರೆಗೂ ಸದರಿ ಜಮೀನಿನ ಬಳಿ ಬಂದಿಲ್ಲ. ಅಸಲು ದಾವಾ.ಸಂ.114/2019 ರ ದಾವಾ ಸ್ವತ್ತಿನಲ್ಲಿ ಈ ಪ್ರಕರಣದ 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ 1 ನೇ ಪ್ರತಿವಾದಿ ಕಾಫೀ, ಅಂಥೋರಿಯಮ್ ಪ್ಲಾಂಟ್, ಸಿಲ್ವರ್ ಮರಗಳು ಮತ್ತು ಕಾಡು ಜಾತಿಯ ಮರಗಳನ್ನು ಬೆಳೆಸಿದ್ದಾರೆ ಎಂದರೆ ಸಾಕ್ಷಿಯು ಕಾಫೀ, ಸಿಲ್ವರ್ ಮರಗಳು ಮತ್ತು ಕಾಡು ಜಾತಿಯ ಮರಗಳು ಮಾತ್ರ ಇದ್ದು ಅಂಥೋರಿಯಮ್ ಪ್ಲಾಂಟ್ ಇಲ್ಲ ಎಂದು ನುಡಿಯುತ್ತಾರೆ.

<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.